ದಿನಾಂಕಃ17.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

ಪಾಟೀ ಸವಾಲು - ಶ್ರೀಡಿ.ಎಸ್.ಕೆ  ವಕೀಲರಿಂದ ಆರೋಪಿ  ಪರ

ನಾನು ಮತ್ತು ಆರೋಪಿ ಸ್ನೇಹಿತರು. ಅರೋಪಿ ಸಾಗರದ ತಾಯಿ ಮತ್ತು ಮಕ್ಕಳ ಆರೋಗ್ಯ ಕೇಂದ್ರದಲ್ಲಿ ಡಿ ಗ್ರೂಫ್ ನೌಕರನಾಗಿ ಕೆಲಸ ಮಾಡುತ್ತಾರೆ ಎಂದರೆ ಸರಿ. ಅದು ಖಾಯಂ ಕೆಲಸವಾಗಿರುವುದಿಲ್ಲ ಎಂದರೆ ಸರಿ. ನಾನು ಸಹ ಸಾಗರದ ಉಪ ವಿಭಾಗ ಆಸ್ಪತ್ರೆಯಲ್ಲಿ ರೋಟರಿಯ ಬ್ಲಡ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತೇನೆ ಮತ್ತು ಅದು ಸಹ ಖಾಯಂ ಕೆಲಸವಾಗಿರುವುದಿಲ್ಲ.

ನನ್ನ ತಂದೆ ಮೃತಪಟ್ಟಿರುತ್ತಾರೆ. ನನ್ನ ತಾಯಿ  ಗೃಹಿಣಿಯಾಗಿರುತ್ತಾರೆ.  ನಾನು ಸಾಗರದಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆ. ನಮ್ಮ ಕುಟುಂಬದ ಎಲ್ಲಾ ವ್ಯವಹಾರವನ್ನು ನಾನು ಮತ್ತು ನನ್ನ ಅಣ್ಣ ನೋಡಿ ಕೊಳ್ಳುತ್ತೇವೆ. ನನ್ನ ಅಣ್ಣ ಬೇರೆ ವಾಸ ಮಾಡುತ್ತಿದ್ದಾರೆ.

ದಿನಾಂಕ 1-1-2024 ರಂದು ಆರೋಪಿ ನನಗೆ ತಿಳುವಳಿಕೆ ನೋಟೀಸು ನೀಡಿರುತ್ತಾರೆ ಎಂದರೆ ಸರಿ. ನಾನು ಆರೋಪಿ ಒಂದು ಚೆಕ್ ಮತ್ತು ಅವರ ತಾಯಿಯ ಒಂದು ಚೆಕ್ ಪಡೆದಿರುತ್ತೇನೆ.  ಸದರಿ ಚೆಕ್ ನಗದೀಕರಣಕ್ಕೆ ಹಾಜರುಪಡಿಸಿದಾಗ ಅವರ ಮೊಬೈಲಿಗೆ ಮೆಸೇಜ್ ಬಂದ ಕಾರಣ  ಅವರಿಗೆ  ಚೆಕ್ ಬಗ್ಗೆ  ತಿಳಿದು ನನಗೆ ನೋಟೀಸು ನೀಡಿರುತ್ತಾರೆ ಎಂದರೆ ಸಾಕ್ಷಿ ನಾನೇ ಅವರಿಗೆ ಕರೆ ಮಾಡಿ ಹೇಳಿರುತ್ತೇನೆ ಎನ್ನುವರು. ಆರೋಪಿ  ನನ್ನ ಬಳಿ 50000-00 ಹಣ ಪಡೆದಿದ್ದು ಅದನ್ನು ನನಗೆ ಹಿಂದಿರುಗಿಸಿರುತ್ತಾರೆ ಮತ್ತು ಆ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಿಪಿ1 ರ ಚೆಕ್ ನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು  ಆರೋಪಿಗೆ ಎಂದಿಗೂ 50000-00 ರೂ ಹಣ ನೀಡಿರುವುದಿಲ್ಲ.

ದಿನಾಂಕ 25-10-2023 ರಂದು ಬೆಳಿಗ್ಗೆ 9-30 ಗಂಟೆಗೆ ಆರೋೕಪಿ ನನ್ನ ಬಳಿ ಹಣ ಕೇಳಿರುತ್ತಾರೆ. ಆರೋಪಿ ತಾಯಿ ಪರ  ಈ ಕೇಸಿನ ಆರೋಪಿ  ಹಣ ಕೇಳಿರುತ್ತಾರೆ. ಆರೋಪಿಗೆ ರೂ 410000-00 ಮತ್ತು ಅವರ ತಾಯಿಗೇ ರೂ 410000-00 ಹಣವನ್ನು ಆರೋಪಿ ಹೃತಿಕ್ ಕೇಳಿರುತ್ತಾರೆ. ಆ ಸಮಯದಲ್ಲಿ ನಾನು ಬ್ಲಡ್ ಬ್ಯಾಂಕಿನಲ್ಲಿ ಕೆಲಸ ಮಾಡುತ್ತಿದ್ದೆ. ನಾನು ಹಣವನ್ನು 1-30 ಗಂಟೆ ಗೆ ತೆಗೆದುಕೊಂಡು ಹೋಗಿ ನೀಡಿರುತ್ತೇನೆ.  ನಾನು ಬೆಳಿಗ್ಗೆ 10 ರಿಂದ 6 ರವರೆಗೆ ಕೆಲವೂಮ್ಮೆ ರಾತ್ರಿ ಪಾಳಯ ಕೆಲಸ ಮಾಡುತ್ತೇನೆ. ನಾನು ಹಣವನ್ನು ಮನೆಯಿಂದ ತೆಗೆದುಕೊಂಡು ಹೋಗಿ ಆರೋಪಿಗೆ ಸಾಗರದ ಉಪವಿಭಾಗೀಯ ಆಸ್ಪತ್ರೆಯ ಪಾರ್ಕಿಂಗ್  ಬಳಿ ನೀಡಿರುತ್ತೇನೆ. ಆ ಸಮಯದಲ್ಲಿ ಆರೋಪಿ ಹೃತಿಕ್ ಮತ್ತು  ಆಕಾಶ್ ಇದ್ದರು.  ಸದರಿ

ವಿಚಾರವನ್ನು ನೋಟೀಸುನಲ್ಲಿ ಮತ್ತು ಪಿರ್ಯಾಧಿಯಲ್ಲಿ ಹೇಳಲು ತೊಂದರೆ ಇರಲಿಲ್ಲ ಎಂದರೆ ಸರಿ.

ಸದರಿ ಸಮಯದಲ್ಲಿ ಆರೋಪಿ ಮತ್ತು ಅವರ ತಾಯಿಗೆ ಸೇರಿದ ಚೆಕ್ ನ್ನು ನಾನು ಪಡೆದುಕೊಂಡಿರುತ್ತೇನೆ. ಸದರಿ ಚೆಕ್ಕಿನಲ್ಲಿ ದಿನಾಂಕ ಮತ್ತು ಹಣ ನಮೂದು ಮಾಡಿದ್ದರೋ ಇಲ್ಲವೋ ನಾನು ನೋಡಿರಲಿಲ್ಲ. ಆರೋಪಿಗಳು ಮನೆ ಕಟ್ಟುತ್ತಿದ್ದೇವೆ ಎಂದು ಹಣ ಕೇಳಿ ಪಡದಿರುತ್ತಾರೆ. ನಾನು ಬೇರೆಯವರಿಗೆ ಮನೆ ಕಟ್ಟಲು ಹಣ ನೀಡುವುದಿಲ್ಲ. ಸದರಿ ಹಣಕ್ಕೆ ಯಾವುದೇ ಬಡ್ಡಿ ಮಾತುಕತೆಯಾಗಿರುವುದಿಲ್ಲ.

ನಾನು ಆರೋಪಿಗಳಿಗೆ ಹಣ ನೀಡಲು ಬ್ಯಾಂಕಿಂದ ಡ್ರಾ ಮಾಡಿರುವುದಿಲ್ಲ. ಅದು ಮನೆಯಲ್ಲಿ ಇದ್ದ ನಗದಾಗಿರುತ್ತದೆ. ನನಗೆ ಬರುವ ವೇತನ ನೇರವಾಗಿ ಬ್ಯಾಂಕ್ ಖಾತೆಗೆ ಹೋಗುತ್ತದೆ. ಸದರಿ ಹಣ ತೆಗೆದರೆ ಪಾಸ್ ಪುಸ್ತಕದಲ್ಲಿ ನಮೂದಿರುತ್ತದೆ ಎಂದರೆ ಸರಿ. ನಾನು ನನ್ನ ಬ್ಯಾಂಕಿನ ಸ್ಟೇಟ್ ಮೆಂಟನ್ನು ನ್ಯಾಯಾಲಯಕ್ಕೆ ನೀಡಿರುವುದಿಲ್ಲ. ನಾನು ಕಾಲೇಜುಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ನೀಡಿರುವುದಿಲ್ಲ.

ದಿನಾಂಕ 1-1-2023 ರಿಂದ ದಿನಾಂಕ 25-10-2023 ರವರೆಗೆ ನನ್ನ ವಹಿವಾಟು ತೋರಿಸಲು ದಾಖಲೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸರಿ. ನಾನು 500-00 ರೂ ಮುಖಬೆಲೆಯ ಹಣ ನೀಡಿರುತ್ತೇನೆ. ಚಕ್ ನ್ನು ನಾನು ರೂ 410000-00 ಹಣವನ್ನು ನಮೂದು ಮಾಡಿ ಬ್ಯಾಂಕಿಗೆ ನಗದೀಕರಣಕ್ಕೆ ಹಾಜರುಪಡಿಸಿರುತ್ತೇನೆ. ಹೆಚ್ಚಿನ ಹಣ ಬರೆದಿರುವುದಿಲ್ಲ ಎನ್ನುವರು. ದಿನಾಂಕವನ್ನು ಸಹ ನಾನೇ ಬರೆದಿರುತ್ತೇನೆ ಎಂದರೆ ಸರಿ. ಹೆಚ್ಚಿನ ಹಣ ತುಂಬಿಕೊಳ್ಳಲು ನನಗೆ ತೊಂದರೆ ಇರಲಿಲ್ಲ ಎಂದರೆ ಸರಿ.

ನಾನು ಆರೋಪಿ ಹೃತಿಕ್ ಪಡೆದ 50000-00 ರೂ ಸಾಲಕ್ಕೆ ನಾನು ಹೃತಿಕನ 2 ಖಾಲಿ ಚೆಕ್ ಮತ್ತು ಅವರ ತಾಯಿಯಾದ ಪಾರ್ವತಿರವರ 2 ಖಾಲಿ ಚೆಕ್ ಗಳನ್ನು ಭದ್ರತೆಗಾಗಿ ಪಡೆದಿದ್ದೆ ಎಂದರೆ ಸರಿಯಲ್ಲ. ಆರೋಪಿ ಸದರಿ ಚೆಕ್‌ಗಳನ್ನು ಹಿಂದಿರುಗಿಸಲು ನನ್ನ ಕೇಳಿ ಕೊಂಡರೂ ಸಹ ನಾನು ಅದನ್ನು ಹಿಂದಿರುಗಿಸದೇ ಬ್ಯಾಂಕಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಆರೋಪಿ ತಿಳುವಳಿಕೆ ನೋಟೀಸು ಕೊಟ್ಟ ನಂತರ ನಾನು ಜವಾಬು ನೋಟೀಸು ನೀಡಿರುತ್ತೇನೆಂದರೆ ಸರಿ. ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಬೇರೆ ತಿಳುವಳಿಕೆ ನೋಟೀಸು ನೀಡಿಲ್ಲ ಎಂದರೆ ಸರಿ. ನನಗೆ ಬರುವ ವೇತನದಿಂದ ನನ್ನ ಕುಟುಂಬಕ್ಕೆ ನಿರ್ವಹಣೆಗೆ ಮಾತ್ರ ಸರಿ ಹೋಗುತ್ತದೆ ಹೊರತು ಯಾವುದೇ ಉಳಿಕೆಯಾಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಡಿ ದರ್ಜೆ ನೌಕರನಾಗಿದ್ದು ಆತನಿಗೆ ಮತ್ತು ಅವರ ತಾಯಿ ಗೂ ರೂ

820000-00 ರೂ ಹಣ ಸಾಲವಾಗಿ ಪಡೆಯುವ ಸಾಮರ್ಥ್ಯ ಇರಲಿಲ್ಲ ಎಂದರೆ ಸರಿಯಲ್ಲ. ಈ ವ್ಯವಹಾರದ ಬಗ್ಗೆ ಆರೋಪಿ ತಾಯಿ ಪಾರ್ವತಿ ರವರಿಗೆ ಯಾವುದೇ ವಿಚಾರ ತಿಳಿದಿಲ್ಲ ಎಂದರೆ ಸರಿಯಲ್ಲ.

ನನ್ನ ಬಳಿ ಇದ್ದ ಚೆಕ್ ಗಳನ್ನು ದುರುಪಯೋಗಪಡಿಸಿಕೊಂಡು ಆರೋಪಿ ಮತ್ತು ಅವರ ತಾಯಿ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆಂದರೆ ಸರಿಯಲ್ಲ. ನಾನು ಆರೋಪಿಗೆ ರೂ 8,20,000-00 ರೂ ಹಣ ನೀಡಲು ಆರ್ಥಿಕ ಸಾಮರ್ಥ ಇರಲಿಲ್ಲ ಮತ್ತು ಅಕ್ರಮ ಲಾಭಕ್ಕಾಗಿ ಈ ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಅವರ ತಾಯಿ ನನ್ನ ಬಳಿ ರೂ 820000-00 ಕೇಳಿರುವುದಿಲ್ಲ ಮತ್ತು ನಾನು ಸಹ ನೀಡಿಲ್ಲ ಎಂದರೆ ಸರಿಯಲ್ಲ.

ಪಿರ್ಯಾಧಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ.ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ